O.S.20/2016 Cross of DW 2

ದಿನಾಂಕ 17-01-2025 ರಂದು ಸಾಕ್ಷಿಗೆ ಪ್ರಮಾಣ ವಚನಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಪಾಟೀ ಸವಾಲು :** 2 ನೇ ಪ್ರತಿವಾದಿಯ ಪರವಾಗಿ ಶ್ರೀ ಎಮ್ ಬಿ ಪಿ ವಕೀಲರಿಂದ.

ದಾವಾ ಆಸ್ತಿಯ ಕುರಿತು ಇದೇ ನ್ಯಾಯಾಲಯದಲ್ಲಿ ಇನ್ನೊಂದು ದಾವೆ ಇತ್ತು ಎಂದರೆ ಸರಿ. ಸದರಿ ದಾವೆಯಲ್ಲಿ ಆದೇಶ ಆಗಿರುತ್ತದೆ ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ಬಾಡಿಗೆ ತುಂಬಬೇಕು ಎಂದು ಆದೇಶ ಆಗಿರುತ್ತದೆ ಎನ್ನುವುದು ಗೊತ್ತಿಲ್ಲ.

ದಾವಾ ಆಸ್ತಿಯ ಅಂಗಡಿಯನ್ನು ಈಗ ನಾನೇ ನಡೆಸುತ್ತಿದ್ದೇನೆ ಎಂದರೆ ಸರಿ. ನಾವು ಒಟ್ಟು ಮೂರು ಜನ ಅಣ್ಣ ತಮ್ಮಂದಿರು. ನೀವು ಮೂರೂ ಜನ ಸೇರಿ ದಾವಾ ಆಸ್ತಿಯ ಅಂಗಡಿಯನ್ನು ನಡೆಸುತ್ತೀರಿ ಎಂದರೆ ಸಾಕ್ಷಿ ತಾನು ಒಬ್ಬನೇ ಎನ್ನುತ್ತಾರೆ. ದಾವಾ ಆಸ್ತಿಯ ಕಬ್ಜೆ ಹೊಂದಿದ ದಿನದಿಂದ ಇಲ್ಲಿಯವರೆಗೆ 2 ನೇ ಪ್ರತಿವಾದಿಗೆ ಯಾವುದೇ ಬಾಡಿಗೆ ಕಟ್ಟಿಲ್ಲ ಎಂದರೆ ಸರಿ. ನಾನು ದಾವಾ ಆಸ್ತಿಯನ್ನು ಕಾನೂನು ಬಾಹಿರವಾಗಿ ಕಬ್ಜೆ ಪಡೆದು ಅಲ್ಲಿ ಹೊಟೇಲ್ ನಡೆಸುತ್ತಿದ್ದೇನೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಇನ್ನೊಂದು ದಾವೆಯಲ್ಲಿ ನನಗೆ ದಾವಾ ಆಸ್ತಿಯ ಬಾಬ್ತು ಬಾಡಿಗೆಯನ್ನು 2 ನೇ ಪ್ರತಿವಾದಿಗೆ ನೀಡಬೇಕೆಂದು ಆದೇಶ ಆಗಿದ್ದರೂ ಸಹ ಹಾಗೂ ಕಬ್ಜೆ ಪಡೆದ ದಿನದಿಂದ ಇಲ್ಲಿಯವರೆಗೆ ನಾನು 2 ನೇ ಪ್ರತಿವಾದಿಗೆ ಯಾವುದೇ ಬಾಡಿಗೆ ನೀಡದೇ ಇರುವುದರಿಂದ ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಬಾಡಿಗೆಯನ್ನು ತುಂಬುತ್ತೇನೆ ಎಂದು 2 ನೇ ಪ್ರತಿವಾದಿಗೆ ಹೇಳಿದರೂ ಸಹ ನ್ಯಾಯಾಲಯದಲ್ಲಿ ಪ್ರಕರಣ ಇರುವುದರಿಂದ ತುಂಬಿಸಿಕೊಳ್ಳುವುದಿಲ್ಲ ಎಂದು ತಿಳಿಸಿದರು ಎನ್ನುತ್ತಾರೆ. ಆ ರೀತಿ 2 ನೇ ಪ್ರತಿವಾದಿ ನಮಗೆ ಇನ್ನೊಂದು ದಾವೆ ನಿಖಾಲಿ ಆಗುವ ಪೂರ್ವದಲ್ಲಿಯೇ ಹೇಳಿರುತ್ತಾರೆ. ಇನ್ನೊಂದು ದಾವೆ ನಿಖಾಲಿ ಆದ ನಂತರ ಸದರಿ ದಾವೆಯಲ್ಲಿ ಆದ ಅದೇಶದ ಪ್ರಕಾರ ಬಾಡಿಗೆ ಕಟ್ಟುತ್ತೇನೆ ಎಂದು ನಾನು 2 ನೇ ಪ್ರತಿವಾದಿಗೆ ಯಾವುದೇ ಅರ್ಜಿ ಸಲ್ಲಿಸಿಲ್ಲ. 2 ನೇ ಪ್ರತಿವಾದಿಗೆ ಲುಕ್ಸಾನು ಉಂಟು ಮಾಡಲು ಕಾನೂನು ಬಾಹಿರವಾಗಿ ಕಬ್ಜೆ ಪಡೆದು ವ್ಯಾಪಾರ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು :** ಶ್ರೀ ಬಿ  ಆರ್ ಎಸ್ ವಕೀಲರ ಪರ ಕುಮಾರಿ  ಬಿ ಎಸ್ ಬಿ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ., ಹಳಿಯಾಳ.